**ಪಿ ಡಬ್ಲೂ : 2**

ಸಾಕ್ಷಿಗೆ ದಿನಾಂಕಃ **18.08.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಎದುರುದಾರರರ ಪರಃ ಶ್ರೀ ಕೆ.ವಿ.ಎಸ್ ವಕೀಲರಿಂದ:</u>**

ಪ್ರಾಸಾ-1 ರವರು ನನ್ನ ತಂದೆಯ ತಂಗಿ ಮಗ ಅಗಿರುತ್ತಾರೆ. ನನ್ನ ತಂದೆಯ ತಂಗಿಯ ಹೆಸರು ನಂಜಮ್ಮ. ನನ್ನ ತಾಯಿಯ ಹೆಸರು ನಿಂಗಮ್ಮ. ನಾನು ವ್ಯವಸಾಯ ವೃತ್ತಿಯನ್ನು ಮಾತ್ರ ಮಾಡುತ್ತೇನೆ. ಅರ್ಜಿದಾರರು ವಾರಸು ಪ್ರಮಾಣಪತ್ರವನ್ನು ಕೋರಿ ಈ ಅರ್ಜಿ ಹಾಕಿರುತ್ತಾರೆ. ವಾರಸು ಮತ್ತು ವಾಸ್ತು ಎಂಬ ಪದಗಳು ಬೇರೆ ಬೇರೆ ಅಗಿರುತ್ತವೆ. ಮಾದೇಗೌಡ ಮತ್ತು ನಂಜಮ್ಮನಿಗೆ ಎದುರುದಾರರು ತಂಗಿ ಮಕ್ಕಳು ಅಗಿರುತ್ತಾರೆ. ಮಾದೇಗೌಡರ ತಂಗಿಯ ಹೆಸರು ನಂಜಮ್ಮ ಅಗಿರುತ್ತದೆ. ನಂಜಮ್ಮ ರವರ ತಾಯಿಯ ಹೆಸರು ಚೆನ್ನಮ್ಮ ಎಂದರೆ ಗೊತ್ತಿರುವುದಿಲ್ಲ. ಅರ್ಜಿದಾರರ ತಾತ ಮತ್ತು ಅಜ್ಜಿಯ ಹೆಸರು ನಂಜೇಗೌಡ ಮತ್ತು ಚೆನ್ನಮ್ಮ ಎಂದರೆ ಸರಿ. ಸದರಿ ನಂಜೆಗೌಡರಿಗೆ ಮೊದಲನೇ ಪತ್ನಿ ಮಾದಮ್ಮ ಎರಡನೇ ಪತ್ನಿ ಚೆನ್ನಮ್ಮ ಎಂದರೆ ಸರಿಯಲ್ಲ. ಸದರಿ ಚೆನ್ನಮ್ಮರವರಿಗೆ ನಂಜಮ್ಮ ಎಂಬುವವರು ಮಗಳು ಎಂದರೆ ಅವರಿಗೆ ಮಕ್ಕಳು ಇರಲಿಲ್ಲ. ಅರ್ಜಿದಾರರ ತಂದೆ ತಾಯಿ ಹೆಸರು ಮಾದೇಗೌಡ ಮತ್ತು ನಂಜಮ್ಮ ಎಂದರೆ ಸರಿ. ಮಾದೇಗೌಡರಿಗೆ ನಂಜಮ್ಮ ಎಂಬ ಮೊದಲನೇ ಪತ್ನಿ, ಚೆನ್ನಮ್ಮ ಎರಡನೇ ಪತ್ನಿ ಇದ್ದರು ಎಂದರೆ ಸರಿ. ಅರ್ಜಿದಾರರ ಮಲತಾಯಿ ಚೆನ್ನಮ್ಮ ರವರಿಗೆ ಮಕ್ಕಳು ಇಲ್ಲ ಎಂದರೆ ಸರಿ.

2) ಅರ್ಜಿದಾರರ ತಾತ ಮತ್ತು ಅಜ್ಜಿಗೆ ಚೆನ್ನಮ್ಮ ಎಂಬ ಎರಡನೇ ಪತ್ನಿ ಇದ್ದು, ಅವರಿಗೆ ನಂಜಮ್ಮ ಎಂಬ ಒಬ್ಬರೇ ಮಗಳು ಇದ್ದು, ಅವರೇ ಮಕ್ಕಳೇ ಎದುರುದಾರರು ಎಂದರೆ ನನಗೆ ಗೊತ್ತಿರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ